ಓ.ಎಸ್. ನಂ.166/2023
ಪಿ. ಡಬ್ಲ್ಯೂ-2

<u>ದಿನಾಂಕಃ **23-06-2026**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಯರ ಪರ ವಕೀಲರಾದ **ಶ್ರೀ.ಎಸ್.ಬಿ.ಪಿ.** ರವರಿಂದಃ

ನಾನು ಶಾಲೆಯನ್ನು ಕಲಿತಿರುವುದಿಲ್ಲ. ಆದ್ದರಿಂದ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಯಣ್ಣ @ ಸಾಬಣ್ಣ ರವರನ್ನು ನಾನು ನೋಡಿರುತೇನೆ. ಕಳೆದ 20-25 ವರ್ಷಗಳ ಹಿಂದೆ ಸಾಯಣ್ಣ @ ಸಾಬಣ್ಣ ರವರು ಮೃತ ಪಟ್ಟಿರುತ್ತಾರೆ. ಆತನ ಹೆಂಡತಿ ಜೀವಂತ ಇರುವುದಿಲ್ಲ ಅವಳ ಹೆಸರು ನರಸಮ್ಮ ಇರುತ್ತದೆ. ನರಸಮ್ಮ ಮೃತ ಪಟ್ಟು 9 ವರುಷಗಳಾಗಿರುತ್ತದೆ. ಸಾಯಣ್ಣ @ ಸಾಬಣ್ಣ ರವರಿಗೆ ಮೂರು ಜನ ಮಕ್ಕಳು ಇರುತ್ತಾರೇ ಅವರ ಹೆಸರುಗಳು ಚಂದ್ರಮ್ಮ, ಮಾಣಿಕಪ್ಪ ಮತ್ತು ಮೊಗಲಪ್ಪ ಇರುತ್ತವೆ. ಚಂದ್ರಮ್ಮ ಮೃತ ಪಟ್ಟಿರುತ್ತಾಳೆ. ಮಾಣಿಕಪ್ಪ ಮತ್ತು ಮೊಗಲಪ್ಪ ರವರು ಸಹಾ ಮೃತ ಪಟ್ಟಿರುತ್ತಾರೆ. ಚಂದ್ರಮ್ಮ ಮೃತ ಪಟ್ಟು 2 ವರುಷಗಳು ಆಗಿರುತ್ತವೆ. ಮಾಣಿಕಪ್ಪ ಮೃತ ಪಟ್ಟು 7 ವರುಷಗಳು ಆಗಿರುತ್ತವೆ. ಮೊಗಲಪ್ಪ ಮೃತ ಪಟ್ಟು 9 ವರುಷಗಳು ಆಗಿರುತ್ತವೆ.

ಚಂದ್ರಮ್ಮ ರವರಿಗೆ 2 ಜನ ಮಕ್ಕಳು ಇರುತ್ತಾರೇ ಅವರ ಹೆಸರುಗಳು ಬುಗ್ಗಪ್ಪ ಮತ್ತು ಮೊಗಲಪ್ಪ ಇರುತ್ತವೆ. ಇವರಿಬ್ಬರು ಜೀವಂತ ಇರುತ್ತಾರೆ . ಚಂದ್ರಮ್ಮ ರವರಿಗೆ ಹೆಣ್ಣು ಮಕ್ಕಳು ಜನಿಸಿರುವುದಿಲ್ಲ. ಮಾಣಿಕಪ್ಪನಿಗೆ 2 ಜನ ಮಕ್ಕಳು ಇರುತ್ತಾರೇ ಅವರ ಹೆಸರುಗಳು ನನಗೆ ನೆನಪಿರುವುದಿಲ್ಲ ಸಾಕ್ಷಿಯು ಮುಂದುವರೆದು ಅವರ ಹೆಸರುಗಳು ಮಹಾದೇವಪ್ಪ ಮತ್ತು ಬಸವರಾಜ ಇರುತ್ತವೆ ಇವರಿಬ್ಬರು ಜೀವಂತ ಇರುತ್ತಾರೆ. ಮಾಣಿಕಪ್ಪನಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಬಸವರಾಜಪ್ಪ ಮೃತ ಪಟ್ಟು ಬಹಳ ವರುಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಆತನು ಮುಂಬಯಿಯಲ್ಲಿ ವಾಸವಾಗಿದ್ದನು. ಮಾಣಿಕಪ್ಪನ ಮಕ್ಕಳು ಮುಂಬಯಿಯಲ್ಲಿ ಇರುವುದಿಲ್ಲ ಅವರೆಲ್ಲರೂ ಊರಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಕೇವಲ ಮಹಾದೇವಪ್ಪ ಊರಲ್ಲಿ ಇರುತ್ತಾನೆ ಎಂದು ಹೇಳುತ್ತಾರೆ. ಮಹಾದೇವಪ್ಪ ಮತ್ತು ಶರಣಪ್ಪ ರವರು ಊರಲ್ಲಿ ವಾಸವಾಗಿರುತ್ತಾರೆ ಎಂದರೆ

ಸರಿಯಲ್ಲ. ಮಾಣಿಕಪ್ಪನಿಗೆ 2 ಜನ ಹೆಣ್ಣು ಮಕ್ಕಳು ಇರುತ್ತಾರೇ ಎಂದರೆ ಸರಿ ಅವರ ಹೆಸರುಗಳು ನನಗೆ ನೆನಪಿರುವುದಿಲ್ಲ. ಮೊಗಲಪ್ಪ ಮೃತ ಪಟ್ಟು 30 ವರುಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 20-25 ವರುಷಗಳು ಆಗಿರುತ್ತವೆ ಎಂದು ಹೇಳುತ್ತಾರೆ. ಮೊಗಲಪ್ಪನ ಮಕ್ಕಳು ಮುಂಬಯಿಯಲ್ಲಿ ವಾಸವಾಗಿರುತ್ತಾರೆ. ಮೊಗಲಪ್ಪನಿಗೆ 2 ಜನ ಮಕ್ಕಳು ಇರಬಹುದು.

ಈ ದಾವೆಯನ್ನು ಬುಗ್ಗಪ್ಪನು ಮಾಣಿಕ್ಕನ ವಿರುದ್ಧ ಸಲ್ಲಿಸಿರುತ್ತಾನೆ. ಸಾಕ್ಷಿಯು ಮುಂದುವರೆದು 2 ಜನರ ವಿರುದ್ದ ಸಲ್ಲಿಸಿರುತ್ತಾನೆ ಎಂದು ಹೇಳುತ್ತಾರೆ. ಚಂದ್ರಮ್ಮಳನ್ನು ಮನೆಗೆ ಮಾಡಿಕೊಂಡಿರುತ್ತಾರೆ. ಚಂದ್ರಮ್ಮಳನ್ನು ಆಂಧ್ರಾದ ವರನೊಂದಿಗೆ ಮದುವೆ ಮಾಡಿಕೊಟ್ಟಿದ್ದರು.

ಸರ್ವೆ ನಂ. 338 ರಲ್ಲಿರುವ 2 ಎಕರೆ ಜಮೀನು ಹಿರಿಯರ ಜಮೀನು ಇರುತ್ತದೆ ಅದೇ ರೀತಿ ಸರ್ವೆ ನಂ. 418 ರಲ್ಲಿರುವ 1 ಎಕರೆ 26 ಗುಂಟೆ ಜಮೀನು ಸಹಾ ಹಿರಿಯರ ಜಮೀನು ಇರುತ್ತದೆ ಸರ್ವೆ ನಂ. 80 ರಲ್ಲಿರುವ 8 ಎಕರೆ 7 ಗುಂಟೆ ಜಮೀನು , ಸರ್ವೆ ನಂ. 78/1 ರಲ್ಲಿರುವ 23 ಗುಂಟೆ ಜಮೀನು, ಸರ್ವೆ ನಂ. 78/2 ರಲ್ಲಿರುವ 9 ಎಕರೆ 11 ಗುಂಟೆ ಜಮೀನು ಇವುಗಳು ಹಿರಿಯರ ಜಮೀನುಗಳು ಇರುತ್ತವೆ. ಇವುಗಳು ಸಾಬಣ್ಣ, ನರಸಪ್ಪ ಮತ್ತು ಮಾಣಿಕಪ್ಪರವರ ಕಡೆಯಿಂದ ಬಂದಿರುತ್ತವೆ. ಸಾಬಣ್ಣನ ಹೆಸರಿನಲ್ಲಿ 2 ಎಕರೆ ಜಮೀನು ಹಾಗೂ 1 ಎಕರೆ 26 ಗುಂಟೆ ಜಮೀನು ಇರುತ್ತವೆ. ಅದೇ ರೀತಿ ಮಾಣಿಕಪ್ಪ ನ 9 ಎಕರೆ 11 ಗುಂಟೆ ಜಮೀನು ಹಾಗೂ 11 ಗುಂಟೆ ಜಮೀನು ಸಹಾ ಇರುತ್ತವೆ. ಕಳೆದ 30-40 ವರುಷಗಳಿಂದ ಇವರಿಬ್ಬರ ಹೆಸರಿನಲ್ಲಿ ಜಮೀನುಗಳು ಇರುತ್ತವೆ. ಪಹಣಿ ಪತ್ರಿಕೆಗಳನ್ನು ನಾನು ನೋಡಿ 10 ವರುಷಗಳು ಆಗಿತ್ತು. ಕಳೆದ 20 ವರುಷಗಳ ಹಿಂದೆ ಪಂಚಾಯತಿ ಆಗಿತ್ತು. ಸದರಿ ಪಂಚಾಯತಿಯಲ್ಲಿ ನಾನು ಇರಲಿಲ್ಲ. ಮಹಾದೇವಪ್ಪನ ಮನೆಯಲ್ಲಿ ಕಿರಿ-ಕಿರಿ ಮಾಡಿದ್ದನು ಆದ್ದರಿಂದ ಪೋಲಿಸ್ ಠಾಣೆಗೆ ಹೋಗಿದ್ದೆವು. ಸದರಿ ಪಂಚಾಯತಿಯಲ್ಲಿ ಏನೋ ನಿರ್ಣಯ ಆಗಿದೆ ಎಂದರೆ ಸಾಕ್ಷಿಯು ಅವರು ಬರೆದುಕೊಟ್ಟ ಹಾಗೇ ನಡೆದುಕೊಳ್ಳಿ ಎಂದು ನಿರ್ಣಯ ಆಗಿದೆ ಎಂದು ಹೇಳುತಾರೆ. ಯಾರು ಬರೆದುಕೊಟ್ಟಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಛಾಪಾ ಕಾಗದದ ಮೇಲೆ ಬರೆದಿದ್ದರು. ಊರಲ್ಲಿ ಪಂಚಾಯತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ಯಾವುದೇ ಕಾಗದವನ್ನು

ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಕರೆಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಹಾಗೂ ಪ್ರತಿವಾದಿಯರ ಮನೆತನದ ಬೆಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯು ಊರಲ್ಲಿ ಇರುತ್ತದೆ ಎಂದರೆ ಸರಿ ಅದೇ ರೀತಿ ವಾದಿಯರ ಹಾಗೂ ಪ್ರತಿವಾದಿಯರ ಮನೆಗಳು ಊರಿನ ಹೊರಗಡೆ ಇರುತ್ತದೆ ಎಂದರೆ ಸರಿಯಲ್ಲ. ವಾದಿಯರ ಹಾಗೂ ಪ್ರತಿವಾದಿಯರ ಮನೆಗಳು ಊರಿನ ಹೊರಗಡೆ ಇದ್ದರು ಸಹಾ ಊರಿನ ಒಳಗಡೆ ಇರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ.

1 ನೇ ವಾದಿಯು ಜಿಲ್ಲಾ ಪಂಚಾಯತ ಸದಸ್ಯನಾಗಿದ್ದನು ಎಂದರೆ ಸರಿ. 1 ನೇ ವಾದಿಯ ಕಡೆಯಿಂದ ನಾನು ಸಾಕಷ್ಟು ಲಾಭವನ್ನು ಪಡೆದುಕೊಂಡಿರುತೇನೆಂದರೆ ಸರಿಯಲ್ಲ ಆದ್ದರಿಂದ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ